ಓ ಎಸ್ಃ 369/2020

ಡಿ ಡಬ್ಲ್ಯೂ ಃ 1

ದಿನಾಂಕಃ 20.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದಃ**

ನನಗೆ ನಿ ಪಿ 1 ರಂತೆ ವಾದಿ ನೀಡಿರುವ ಚೆಕ್ ಗಳು ನಗದೀಕರಣವಾಗಿರುತ್ತವೆ ಎಂದರೆ ಸರಿ. ಸದರಿ ಚೆಕ್ ಗಳಲ್ಲಿ ವಾದಿಗಳ ಖಾತೆಯ ನಂಬರ್ ಗಳು ಇದ್ದವು ಎಂದರೆ ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಪ್ರತಿ ಚೆಕ್ ನಲ್ಲಿ ಖಾತೆದಾರರ account number ಇರುತ್ತದೆ ಎಂದರೆ ಸಾಕ್ಷಿ ನಾನು ಅದನ್ನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಚೆಕ್ ನಲ್ಲಿ ಖಾತೆದಾರರ account number ಇರುತ್ತದೆ ಎಂದರೆ ನಾನು ಗಮನಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಚೆಕ್ ವ್ಯವಹಾರಗಳನ್ನು ಮಾಡಿರುವುದಿಲ್ಲ. ನಾನು ಯಾವುದೇ ಚೆಕ್ ಗಳಲ್ಲಿ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ. ನನಗೆ ಚೆಕ್ ನ ವಿಚಾರ ಗೊತ್ತಿರುವುದಿಲ್ಲ.

ನಾನು ಬಿ.ಎ., ಪದವೀಧರನಾಗಿರುತ್ತೇನೆ. ನನ್ನ ಖಾತೆಗೆ ಸಂಬಂದಪಟ್ಟ ಎ ಟಿ ಎಂ ಕಾರ್ಡ್ ನ್ನು ಪಡೆದಿರುತ್ತೇನೆ. ಸದರಿ ಎ ಟಿ ಎಂ ಕಾರ್ಡ್ ಕೊಡಬೇಕಾದರೆ ಬ್ಯಾಂಕ್ ನವರು ಚೆಕ್ ಪಡೆಯುತ್ತಾರೆ ಎಂದರೆ ಸರಿಯಲ್ಲ. ಚೆಕ್ ಪಡೆಯದೇ ಇದ್ದರೆ ಎ ಟಿ ಎಂ ಕಾರ್ಡ್ ಕೊಡುವುದಿಲ್ಲ ಎಂದರೆ ಸರಿಯಲ್ಲ. ನಿ ಡಿ 7 ಬ್ಯಾಂಕ್ ಸ್ಟೇಟ್ ಮೆಂಟ್ ನಲ್ಲಿ ನಾನು ಚೆಕ್ ನಲ್ಲಿ ವ್ಯವಹಾರ ಮಾಡಿರುವ ಹಾಗೆ ದಿನಾಂಕಃ 20.08.2016 ರಲ್ಲಿ ಕಾಣಿಸುತ್ತದೆ , ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಗೊತ್ತಿಲ್ಲ. ನನಗೆ ಚೆಕ್ ವ್ಯವಹಾರದ ಬಗ್ಗೆ ಎಲ್ಲ ಗೊತ್ತಿದ್ದರೂ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನಾಗರಾಜು ಕೆ ಸಿ ರವರಿಗೆ ಸ್ವಲ್ಪ ಸ್ವಲ್ಪ ಹಣ ಕೊಟ್ಟಿರುವುದಕ್ಕೆ ಏನಾದರೂ ಬರವಣಿಗೆ ಪಡೆದಿರುತ್ತೇನಾ ಎಂದರೆ ಪಡೆದಿರುವುದಿಲ್ಲ. ನಾನು ನಾಗರಾಜು ಕೆ ಸಿ ರವರಿಗೆ ಹಣ ಕೊಡುವುದಕ್ಕೆ ವಾದಿಯ ಹತ್ತಿರ ಯಾವುದೇ authorization ಪಡೆದಿರುವುದಿಲ್ಲ. ನಾನು ನಾಗರಾಜು ಕೆ ಸಿ ರವರ ಹತ್ತಿರ ಮಗ್ಗದ ಕೆಲಸ ಮಾಡುತ್ತಿದ್ದ ಸಮಯದಲ್ಲಿ ನನಗೂ ಅವರಿಗೂ ವ್ಯವಹಾರ ಇತ್ತಾ ಎಂದರೆ ಸಾಕ್ಷಿ ನಾನು ಅವರ ಹತ್ತಿರ ಕೂಲಿ ಕೆಲಸ ಮಾಡುತ್ತಿದ್ದೆ, ನನಗೆ ಅವರೊಂದಿಗೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ಎಷ್ಟನೇ ಸಾಲಿನವರೆಗೂ ವ್ಯವಹಾರ ಮಾಡುತ್ತಿದ್ದೆ ಎಂದರೆ ನೆನಪಿಲ್ಲ.

**ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**